

# ಕುಂಬಳಕಾಯಿ ಮುಖ

ಒಂದು ಕುಂಬಳಕಾಯನ್ನು ಪೂರ್ಣವಾಗಿ ಬೆಳೆಸಲು ನಿಸರ್ಗಕ್ಕೆ ತಿಂಗಳುಗಳೇ ಬೇಕು. ಅದನ್ನು ಕೊರೆದು–ಕತ್ತರಿಸಿ ಸುಂದರ ಕಲಾಕೃತಿಯನ್ನಾಗಿಸಲು ರೇ ಲಾಫೆನ್ ಎಂಬ ಕಲಾವಿದನಿಗೆ ಕೇವಲ ಎರಡು ಗಂಟೆಗಳು ಸಾಕು!

ಆತ ಶಾಲೆಯೊಂದರಲ್ಲಿ ಒಬ್ಬ ಕಲಾ ಶಿಕ್ಷಕ. ಕುಂಬಳಕಾಯಿಯನ್ನು ಕಲಾಕೃತಿಯಾಗಿ ಅರಳಿಸುವ ಹುಚ್ಚು ಆತನಿಗೆ. ಅದಕ್ಕಾಗಿ ಬೇಕಾದದ್ದು ಒಂದು ಚಾಕು ಹಾಗು ಕೆಲವು ಚಮಚೆಗಳು. ಹಾಗೆಂದು ಎಲ್ಲಾ ಕುಂಬಳಕಾಯಿಗಳು ಕಲಾಕೃತಿಗಳಾಗಿ ರೂಪಗೊಳ್ಳುವುದಿಲ್ಲ. ತೊಗಟೆ ಹಾಗೂ ತಿರುಳು ದಪ್ಪವಾಗಿರುವ, ಹೆಚ್ಚು ಭಾರವುಳ್ಳ ಕಾಯಿಗಳು ಸೂಕ್ತ ಎನ್ನುತ್ತಾನೆ ಕಲಾವಿ ರೇ. ಕೆಲವೊಮ್ಮೆ ಮೇಲ್ನೋಟಕ್ಕೆ ಚೆನ್ನಾಗಿ ಕಾಣುವ ಕುಂಬಳಕಾಯಿ ಕೊರೆಯತೊಡಗಿದಾಗ, ಕಲೆಗೆ ಯೋಗ್ಯವಲ್ಲ ಎಂದು ಗೊತ್ತಾಗುತ್ತದಂತೆ.

41ರ ಹರೆಯದ ರೇ ಲಾಫೆನ್, ಕುಂಬಳಕಾಯಿಗಳ ಹಾಗೂ ತನ್ನ ಕಲಾಭಿವ್ಯಕ್ತಿಯ ಕುರಿತು ಹೀಗೆ ಹೇಳುತ್ತಾನೆ: ಸರಿಯಾದ ಹೊರ ಏಣುಗಳಿರುವ ಕುಂಬಳಕಾಯಿಗಳು ಕಲಾಕೃತಿಯ ಹೊರ ರೂಪದ ಏರಿಳಿತಗಳನ್ನು ರೂಪಿಸಲು ಅತ್ಯಂತ ಸೂಕ್ತ. ಸಾಮಾನ್ಯವಾಗಿ ಒಂದು ಕಲಾಕೃತಿಯನ್ನು ರೂಪಿಸಲು ಎರಡು ಗಂಟೆ ಸಾಕು. ಅತಿ ಅಪರೂಪದ ಸೂಕ್ಷ್ಮ ಕೆತ್ತನೆಯ ಕಲಾಕೃತಿಗಳಿಗೆ ಪೂರ್ಣ ಒಂದು ದಿನ ಬೇಕು.'

ರೇ 13 ವರ್ಷಗಳ ಕಲಾ ಶಿಕ್ಷಕನಾಗಿ ಅಮೆರಿಕಾದ ಮಿಚಿಗನ್ ಶಾಲೆಯಲ್ಲಿ ಕೆಲಸ ಮಾಡಿದ್ದಾನೆ. ಆ ನಂತರ ಮಾಡೆಲ್ ಡಿಸೈನರ್ ಆಗಿಯೂ ದುಡಿದಿದ್ದಾನೆ. ಒಂದು ದಿನ ಕುಂಬಳಕಾಯಿಯಲ್ಲಿ ನಿರ್ಮಿಸಿದ ಸಾಮಾನ್ಯ ಕಲೆಯೊಂದನ್ನು ನೋಡಿ, ತಾನೂ ಏಕೆ ಕುಂಬಳಕಾಯಿಯಲ್ಲಿ ಕಲೆ ಅರಳಿಸಬಾರದು ಎಂದು ಅಂದುಕೊಂಡನಂತೆ. ಅವತ್ತು ಶಾಲೆಗೆ ಹೋದಾಗ, ಕೆಲವು ಕುಂಬಳಕಾಯಿಗಳು ಕಾಣಿಸಿದವು. ಅಲ್ಲಿಯೇ ಆತ ತನ್ನ ಕಲಾ ಪ್ರಯೋಗಕ್ಕೆ ಶ್ರೀಕಾರ ಹಾಕಿದ. ಅಲ್ಲಿನ ವಿದ್ಯಾರ್ಥಿಗಳ ಮೆಚ್ಚುಗೆ ಲಭಿಸಿತು.

ಈಗ ಕುಂಬಳಕಾಯಿ ಕೆತ್ತನೆ ಕಲೆಯಲ್ಲಿ ರೇ ಲಾಫೆನ್ ಧ್ರುವತಾರೆ. ಅಮೆರಿಕದ ಟಿ.ವಿ ಗಳಲ್ಲಿ ಆತನ ಕಲಾಕೃತಿಗಳ ಪ್ರದರ್ಶನವಾಗಿದೆ. ಆತನೊಬ್ಬ ಜನಪ್ರಿಯ ಕಲಾವಿದ.

■ ಸುಭಾಸ ಯಾದವಾಡ







